(i) ಶಿರಗುಪ್ಪ ತಾಲ್ಲೂಕಿನ ಸಿರಿಗೆರೆ ಹಳ್ಳಿಯಲ್ಲಿ ಜನತಾ ಮನೆಗಳನ್ನು ಕಟ್ಟಿಸುವ ಬಗೆ

ಶ್ರೀ ಆರ್. ಎನ್. ನಾಯಕ್.—ಶಿರಗುಪ್ಪ ತಾಲ್ಲೂಕಿನ ಸಿರಿಗೆರೆ ಹಳ್ಳಿಯಲ್ಲಿ ಜನತಾ ಮನೆಗಳನ್ನು ಕಟ್ಟಿಸುವುದರ ಬಗ್ಗೆ ೧೯೭೫ ರಿಂದ ೧೯೮೦ರ ಮಧ್ಯೆ ಖಾಸಗಿಯವರಿಗೆ ಗುತ್ತಿಗೆ ಕೊಡಲಾಗಿತ್ತು. ಆ ಬಗ್ಗೆ ೫೦,೦೦೦ ರೂಪಾಯಿ ಕೊಡಲಾಗಿತ್ತು ಎಂದು ತಿಳಿದು ಬಂದಿದೆ. ಆದರೆ ಈವರೆಗೆ ಮನೆಗಳನ್ನು ಸರಿಯಾಗಿ ಕಟ್ಟಿಸಿಲ್ಲ. ಕೆಲವು ಕಟ್ಟಿದ ಮನೆಗಳು ಸಹ ಅಂದಾಜಿನ ಪ್ರಕಾರ ಆಗಿಲ್ಲ. ಮನೆಗಳನ್ನು ಕಟ್ಟಿಸಬೇಕಾದ ಹಣವನ್ನು ದುರುಪಯೋಗಪಡಿಸಲಾಗಿದೆ. ಇಷ್ಟು ವರ್ಷದವರೆಗೆ ಕೆಲಸವೂ ಚೆನ್ನಾಗಿ ಆಗದೆ ಟಿ.ಡಿ.ಬಿ.ಗೆ ಹಣವು ಹಿಂತಿರುಗಿಸಿದ ಖಾಸಗಿ ವ್ಯಕ್ತಿ ಯಾರು? ಆತನ ಮೇಲೆ ಯಾವ ಕ್ರಮ ಕೈಕೊಳ್ಳಲಾಗಿದೆ? ಏನು ಕ್ರಮ ಕೈಕೊಂಡಿದ್ದೀರಿ? ಅಂಥ ವ್ಯಕ್ತಿ ರಾಜಕೀಯ ಪುಡಾರಿಯೇ ಹೇಗೆ? ಅವರು ಈ ಸದನದಲ್ಲಿರುವ ವ್ಯಕ್ತಿಯೇ ಹೇಗೆ? ಅಂಥ ತಪ್ಪು ಮಾಡಿದ ವ್ಯಕ್ತಿಗೆ ಯಾರು ರಕ್ಷಣೆ ಕೊಡಬೇಕೆಂದು ಪ್ರಯತ್ನಿಸುತ್ತಿದ್ದಾರೆ?

ಈಗಾಗಲೇ ಸರಕಾರದ ಹತ್ತಿರ ಸಂಪೂರ್ಣ ಮಾಹಿತಿ ಇದ್ದು ಆ ಮಾಹಿತಿಯನ್ನು ಸದನಕ್ಕೆ ತಿಳಿಸಬೇಕಾಗಿ ವಿನಂತಿ. ಮತ್ತು ತಪ್ಪು ಮಾಡಿದ ವ್ಯಕ್ತಿಯ ವಿರುದ್ಧ ಸಮಗ್ರ ತನಿಖೆ ನಡೆಸಲು ಸದನದ ಸಮಿತಿ ರಚಿಸುವ ಬಗ್ಗೆ ನಾನು ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಪಶು ಹಾಗೂ ಸಾರಿಗೆ ರಾಜ್ಯ ಸಚಿವರು).—ಇದೇ ವಿಷಯಕ್ಕೆ ಸಂಬಂಧಪಟ್ಟಿ ಹಾಗೆ ನಿನ್ನೆ ಒಂದು ಪ್ರಶ್ನೆ ಬಂದಿತ್ತು. ಮಾನ್ಯ ಸದಸ್ಯರಾದ ರಾಮಯ್ಯನವರು ಈ ಪ್ರಶ್ನೆಯನ್ನು ಹಾಕಿದ್ದರು. ನಿನ್ನೆ ದಿವಸ ಈ ವಿಷಯದ ಬಗ್ಗೆ ಕಚೇರಿಯಲ್ಲಿ ಪ್ರಸ್ತಾಪ ಮಾಡೋಣ ವೆಂದು ಹೇಳಿದ್ದೇನೆ. ಸದನದಲ್ಲಿರತಕ್ಕ ವ್ಯಕ್ತಿಯೇ ಎಂದು ಕೇಳಿದ್ದಾರೆ. ಆವರಂ ಈ ಸದನದ ಸದಸ್ಯರಂ ಹೌದು.

ಶ್ರೀ ಎಸ್. ಬಂಗಾರಪ್ಪ.—ಸದನದ ಸದಸ್ಯರಾದರೆ ಅವರು ಯಾರು?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸಿರಗುಪ್ಪ ಕ್ಷೇತ್ರದ ಶಾಸಕರಾದ ಶ್ರೀ ಸಿ.ಎಂ. ರೇವಣಸಿದ್ದಯ್ಯ ೧೯೭೮ನೇ ಇಸವಿಯಲ್ಲಿ ಸಿರಗುಪ್ಪದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಕಂಟ್ರಾಕ್ಟ್ ಕೊಟ್ಟಿದ್ದಾರೆ. ಜನತಾ ಮನೆಗಳನ್ನು ಕಟ್ಟಿಸಲಿಕ್ಕೆ ಮಾನ್ಯ ರೇವಣಸಿದ್ದಯ್ಯನವರು ಕಂಟ್ರಾಕ್ಟ್ ತೆಗೆದುಕೊಂಡಿದ್ದಾರೆ. ಜವರು ಮನೆಗಳನ್ನು ಕಟ್ಟಿಸಿದ್ದಾರೆ. ಮನೆಗಳನ್ನು ಕಟ್ಟಿಸಿ ಉಳಿದ ಹಣ ೧೧ ಸಾವಿರ ರೂಪಾಯಿ ಗಳನ್ನು ವಾಪಸ್ಸು ಸರ್ಕಾರಕ್ಕೆ ಕೊಟ್ಟಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ನನ್ನ ಕ್ರಿಯಾ ಲೋಪ ಏನೆಂದರೆ, ಮಾನ್ಯ ಸದಸ್ಯರುಗಳ ಮೇಲೆ ಏನಾದರೂ ಆಪಾದನೆಗಳನ್ನು ಮಾಡುವುದು ಇದ್ದರೆ, ನಿಯಮಗಳ ಪ್ರಕಾರ ಮೊದಲು ನೋಟೀಸ್ ಕೊಡಬೇಕಾಗುತ್ತದೆ. ಸದಸ್ಯರಿಗೂ ಕೂಡ ನೋಟೀಸ್ ಕೊಡಬೇಕೆಂದು ಇದೆ. ಇವತ್ತು ರೇವಣಸಿದ್ದಯ್ಯನವರ ಮೇಲೆ ಬಂದಿರಬಹುದು. ನಾಳೆ ನನ್ನ ಮೇಲೆ ಬರಬಹುದು, ಆಮೇಲೆ ಮಾನ್ಯ ರಾಮಯ್ಯನವರ ಮೇಲೆ ಬರಬಹುದು ಇದು ನಿಯಮದ ಪ್ರಶ್ನೆ.

SRI C.M. REVANA SIDDAIAH.—I am here. Let me have a chance to answer.

ಶ್ರೀ ಎಂ. ರಾಮಪ್ಪ.—ಇಂತಹ ಆಪಾದನೆಗಳು ಬಂದರೆ ನಾನು ಈ ಸದನನಲ್ಲಿ ಕುಳಿತುಕೊಳ್ಳುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾರ್ವಜನಿಕ ಜೀವನದಲ್ಲಿರತಕ್ಕವರು ಯಾರೇ ಆದರೂ ಅವರ ಮೇಲೆ ಆಪಾದನೆಗಳು ಬರುತ್ತವೆ. ನಿಯಮದ ಪ್ರಕಾರ ಸದಸ್ಯರಿಗೆ ತಿಳುವಳಿಕೆ ಮಾಡಿಕೊಡ ಬೇಕೆಂದೂ ಆಮೇಲೆ ವಿಷಯವನ್ನು ಎತ್ತಬೇಕೆಂದು ನಿಯಮವಿದೆ. ಯಾರ ಬಗ್ಗೆ ಆದರೂ ಮಾತನಾ ಡುವಾಗ ನೋಟೀಸ್ ಕೊಡುವುದು ನಮ್ಮ ಕರ್ತವ್ಯ. ಆಮೇಲೆ ಸಭಾಧ್ಯಕ್ಷರ ಅಪ್ಪಣೆಯನ್ನು ಪಡೆಯ ಬೇಕಾಗುತ್ತದೆ, ತಾವು ದಯವಿಟ್ಟು ನೋಟೀಸ್ ಕೊಡಿ, ಆಮೇಲೆ ಪ್ರಸ್ತಾಪ ಮಾಡಿ.

SRI C.M. REVANA SIDDAIAH.—Let me have an opportunity

ಅಧ್ಯಕ್ಷರು.—ಏತಕ್ಕೆ ಇಷ್ಟು ಅವಸರ ಮಾಡುತ್ತೀರಿ ಉತ್ತರವನ್ನು ಆಮೇಲೆ ಕೊಡಿ,

ಶ್ರೀ ಎಂ, ರಾಮಪ್ಪ.—ನಮಗೂ ಅವಕಾಶ ಕೊಡಿ,

ಶ್ರೀ ಪಿ.ಜಿ ಆರ್. ಸಿಂಧ್ಯ.—ನಾನು ಈಗಾಗಲೇ ಹೇಳಿದ್ದೇನೆ. ಮನೆಗಳನ್ನು ಕಟ್ಟಿಸಿದ್ದಾರೆ. ಬಾಕಿ ಉಳಿದಿರತಕ್ಕ ಹಣವನ್ನು ವಾಪಸ್ಸು ಮಾಡಿದ್ದಾರೆ, ಆದರ ಜೊತೆಗೆ ಜನತಾ ಮನೆಗಳನ್ನು ಕಟ್ಟತಕ್ಕ ಕೆಲಸ ಸಣ್ಣ ಕೆಲಸವಾಗಿರುವುದರಿಂದ ಒಂದು ಮನೆಗೆ ನಾಲ್ಕೈದು ಸಾವಿರ ರೂಪಾಯಿ ಕೊಡುತ್ತೇವೆ. ಅವರು ಹೆಚ್ಚಿಗೆ ಹಣವನ್ನು ತಮ್ಮ ಸ್ವಂತ ಜೇಬಿನಿಂದ ಹಾಕಿ ಮನೆಗಳನ್ನು ಕಟ್ಟಿಸಿದ್ದಾರೆ. ತಾವೇನಾ ಈಗ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ ಅದನ್ನು ಮಾನ್ಯ ಕಂದಾಯ ಸಚಿವರು ಹೇಳಿದಹಾಗೆ ನಿಯಮಗಳ ಪ್ರಕಾರ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಜನತಾ ಮನೆಗಳನ್ನು ಕಟ್ಟಲಿಕ್ಕೆ ಯಾವ ಹಂತದಲ್ಲಿ ಮುಂಗಡ ಹಣವನ್ನು ಕೊಟ್ಟಿದ್ದೀರಿ? ನಿಮ್ಮ ನಿಯಮದ ಪ್ರಕಾರ ಮನೆಗಳನ್ನು ಕಟ್ಟಿಸಿದ್ದಾರೆಯೆ? ಹಣವನ್ನು ವಾಪಸ್ಸು ಕೊಟ್ಟಿದ್ದಾರೆಂದು ಹೇಳಿದ್ದೀರಿ ೧೧ ಸಾವಿರ ರೂಪಾಯಿ ಹಣವನ್ನು ಯಾವಾಗ ವಾಪಸ್ಸು ಕೊಟ್ಟರು? ಹಣವನ್ನು ಯಾವಾಗ ತೆಗೆದುಕೊಂಡಿದ್ದರು? ಸುಮ್ಮನೆ ಅಪಾದನೆ ಮಾಡತಕ್ಕದ್ದಲ್ಲ.

ಶ್ರೀ ಸಿ. ಎಂ. ರೇವಣ್ಣ ಸಿದ್ದಯ್ಯ.—ದಯಮಾಡಿ ನನಗೂ ಮಾತನಾಡಲು ಅವಕಾಶ ಕೊಡಿ. ನಾನು ಹೇಳುತ್ತೇನೆ. ಆಲ್ಲಿ ಮನೆಗಳು ಆಗಿರಲಿಲ್ಲ. ನನಗೆ ಆ ಮನೆಗಳನ್ನು ಕಟ್ಟಿ ಎಂಬುದಾಗಿ ಯಾರೂ ಕಂಟ್ರಾಕ್ಟ್ ಕೊಟ್ಟಿಲ್ಲ. ಅಲ್ಲಿಗೆ ಪಂಜುರಾದಂತಹ ಮನೆಗಳು ಪೂರ್ತಿಯಾಗಿರಲಿಲ್ಲ. ನಾನು ಆ ಊರಿನ ಅಧ್ಯಕ್ಷ ೩೨ ವರ್ಷಗಳಿಂದ. ಅಸಿಸ್ಟೆಂಟ್ ಕಮೀಷನರ್ ಒಬ್ಬರು ನಮ್ಮ ಊರಿಗೆ ಬಂದಿದ್ದಾಗ ಏಕೆ ಈ ಮನೆಗಳನ್ನು ಪೂರ್ತಿ ಮಾಡಿಲ್ಲ? ನೀವು ಮಾಡದೆ ಇನ್ನು ಯಾರು ಮಾಡುತ್ತಾರೆ? ಅಂತ ಹೇಳಿದರು.

ಶ್ರೀ ಎಂ. ರಾಮಪ್ಪ.—ಅದನ್ನೂ ಕೂಡ ವಿಚಾರಣೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಆ ಬಗ್ಗೆ ನಿರ್ದಿಷ್ಟವಾದ ನೋಟೀಸ್ ಕೊಡಿ. ಅಧ್ಯಕ್ಷರು ಅದಕ್ಕೆ ಅಪ್ಪಣೆ ಕೊಟ್ಟರೆ ಚರ್ಚೆ ಮಾಡೋಣ.

ಅಧ್ಯಕ್ಷರು.—ಪ್ರತ್ಯೇಕವಾಗಿ ಮಾಡೋಣ.

(ii) ಉಡುಪಿ ತಾಲ್ಲೂಕಿನ ಹಿರಿಯಡ್ಕ ಸರಕಾರಿ ಕಿರಿಯ ಮಹಾ ವಿದ್ಯಾಲಯದಲ್ಲಿ ಉಪಾನ್ಯಾಸಕರ ಕೊರತೆಯಿರುವ ಬಗ್ಗೆ.

ಶ್ರೀ ಮತಿ ಮನೋರಮ ಮಧ್ವರಾಜ್ —ಮಾನ್ಯ ಅಧ್ಯಕ್ಷರೆ,

"ಉಡುಪಿ ತಾಲ್ಲೂಕಿನ ಹಿರಿಯಡ್ಕ ಸರಕಾರಿ ಕಿರಿಯ ಮಹಾ ವಿದ್ಯಾಲಯದಲ್ಲಿ ಅರ್ಥ ಶಾಸ್ತ್ರ, ಇತಿಹಾಸ, ಮತ್ತು ಕನ್ನಡ ಪಾಠಗಳನ್ನು ಭೋದಿಸಲು ಉಪನ್ಯಾಸಕರ ಕೊರತೆಯಿಂದಾಗಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕಾಗಿ ಒತ್ತಾಯಿಸುತ್ತೇನೆ.''

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಈ ವಿಚಾರವನ್ನು ಮಾನ್ಯ ವಿದ್ಯಾಮಂತ್ರಿಗಳ ಗಮನಕ್ಕೆ ತಂದು ನಾಳೆ ಅಥವಾ ನಾಡಿದ್ದು ಅದರ ಬಗ್ಗೆ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಕೆ. ಎಸ್. ಬೀಳಗಿಯವರು–ಸದಸ್ಯರು ಬಂದಿಲ್ಲ.

(3) ಭೂ ಸುಧಾರಣಾ ಮಸೂದೆಯಿಂದ ಗೇಣಿದಾರರಿಗೆ ಪರಿಹಾರವನ್ನು ನೀಡದಿರುವ ಬಗ್ಗೆ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ,